# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 110 |
| ಸದಸ್ಯರ ಹೆಸರು | : | ಪಿ.ಹೆಚ್. ಪೂಜಾರ್ |
| ಉತ್ತರಿಸುವ ದಿನಾಂಕ | : | 27.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಿ ಸರ್ಕಾರ ಘೋಷಣೆ ಮಾಡಿ ನೂತನಾಗಿ ಮೇಲ್ದರ್ಜೆಗೇರಿಸಲ್ಪಟ್ಟ ಬಾಗಲಕೋಟೆ ಜಿಲ್ಲೆಯ ಶಿರೂರು ಮತ್ತು ಲೋಕಾಪುರ ಅದರಂತೆ ವಿಜಯಪುರ ಜಿಲ್ಲೆಗಳಲ್ಲಿ ಬಬಲೇಶ್ವರ ಮತ್ತು ತಿಕೋಟ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯ್ತಿಗಳೆಂದು ಪರಿಗಣಿಸಿ ಘೋಷಣೆ ಮಾಡಿರುವುದು ನಿಜವೇ ;</td><td>ಹೌದು. ವಿವರ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ</th></tr>
<tr><td>1</td><td>ಶಿರೂರು ಪಟ್ಟಣ ಪಂಚಾಯಿತಿ</td><td>ನಅಇ 33 ಎಂಎಲ್ಆರ್ 2019, ದಿನಾಂಕ:22.01.2021.</td></tr>
<tr><td>2</td><td>ಲೋಕಾಪುರ ಪಟ್ಟಣ ಪಂಚಾಯಿತಿ</td><td>ನಅಇ 06 ಎಂಎಲ್ಆರ್ 2020, ದಿನಾಂಕ:31.12.2020</td></tr>
<tr><td>3</td><td>ಬಬಲೇಶ್ವರ ಪಟ್ಟಣ ಪಂಚಾಯಿತಿ</td><td>ನಅಇ 02 ಎಂಎಲ್ಆರ್ 2018, ದಿನಾಂಕ:23.03.2021.</td></tr>
<tr><td>4</td><td>ತಿಕೋಟ ಪಟ್ಟಣ ಪಂಚಾಯಿತಿ</td><td>ನಅಇ 05 ಎಂಎಲ್ಆರ್ 2018, ದಿನಾಂಕ:05.06.2020</td></tr>
</table></td></tr>
<tr><td>(ಆ)</td><td>ಕಳೆದ 4 ವರ್ಷಗಳಿಂದ ನೂತನವಾಗಿ ಪಟ್ಟಣ ಪಂಚಾಯಿತಿಗಳನ್ನು ಘೋಷಣೆ ಮಾಡಿರುವ ಸಂಸ್ಥೆಗಳಿಗೆ ಚುನಾವಣೆ ನಡೆಸದೆ ಇರುವ ಕಾರಣಕ್ಕೆ ಸ್ಥಳೀಯವಾಗಿ ಸಮಸ್ಯೆಗಳನ್ನು ತಿಳಿದು ಪರಿಹಾರಕ್ಕಾಗಿ ತಿಳಿಸುವ ಜನಪ್ರತಿನಿಧಿಗಳು ಇಲ್ಲದ ಕಾರಣಕ್ಕಾಗಿ ಕೇವಲ ಅಧಿಕಾರಿಗಳ ಮುಖಾಂತರ ನಡೆಸುತ್ತಾ ಬಂದಿರುವುದರಿಂದ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ಯಾವಾಗ?</td><td>ಬಾಗಲಕೋಟೆ ಜಿಲ್ಲೆಯ ಶಿರೂರು ಹಾಗೂ ಲೋಕಾಪುರ ಪಟ್ಟಣ ಪಂಚಾಯತಿಗಳಿಗೆ ವಾರ್ಡ್‌ವಾರು ಮೀಸಲಾತಿ ನಿಗಧಿಪಡಿಸುವ ಸಂಬಂಧ ಸರ್ಕಾರದಿಂದ ಅಧಿಸೂಚನೆ ಹೊರಡಿಸಿ, ಆಕ್ಷೇಪಣೆಯನ್ನು ಆಹ್ವಾನಿಸಲಾಗಿರುತ್ತದೆ. ಅದರಂತೆ ಸದರಿ ಅಧಿಸೂಚನೆಗಳಿಗೆ ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ ರವರಿಂದ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ಶಿರೂರು ಹಾಗೂ ಲೋಕಾಪುರ ಪಟ್ಟಣ ಪಂಚಾಯತಿಗಳಿಗೆ ವಾರ್ಡ್‌ವಾರು ಮೀಸಲಾತಿ ನಿಗಧಿಪಡಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br><br>ವಿಜಯಪುರ ಜಿಲ್ಲೆ ಬಬಲೇಶ್ವರ ಹಾಗೂ ತಿಕೋಟ ಪಟ್ಟಣ ಪಂಚಾಯತಿಗಳ ವಾರ್ಡ್ ವಿಂಗಡಣೆ ಅಂತಿಮ ಅಧಿಸೂಚನೆಯನ್ನು ಉಪ ವಿಭಾಗಾಧಿಕಾರಿಗಳು, ವಿಜಯಪುರ ಜಿಲ್ಲೆರವರು ದಿನಾಂಕ:31.12.2025ರಂದು ಹೊರಡಿಸಿರುತ್ತಾರೆ. ವಾರ್ಡ್‌ವಾರು ಮೀಸಲಾತಿ ನಿಗಧಿ ಸಂಬಂಧ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.<br><br>ನೂತನ ಪಟ್ಟಣ ಪಂಚಾಯಿತಿಗಳಿಗೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ಕಲಂ-42ರ ಉಪಕಲಂ-5ರ ರೀತ್ಯಾ ಸುಗಮ ಆಡಳಿತ ನಡೆಸುವ ದೃಷ್ಟಿಯಿಂದ ಸರ್ಕಾರದಿಂದ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ. ಆಡಳಿತಾಧಿಕಾರಿಗಳು ಆಯಾ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗದಂತೆ ಕ್ರಮವಹಿಸುತ್ತಿರುತ್ತಾರೆ. ಈ ರೀತಿಯಾಗಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಸೂಕ್ತ</td></tr>
</table>

| | | |
|---|---|---|
| | | ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಅಭಿವೃದ್ಧಿ ಕುಂಠಿತಗೊಂಡಿರುವುದಿಲ್ಲ. ನಗರ ಸ್ಥಳೀಯ ಸಂಸ್ಥೆಗಳಲ್ಲಿನ ವಾರ್ಡುವಾರು ಮೀಸಲಾತಿ ಪ್ರಕ್ರಿಯೆ ಪೂರ್ತಿಗೊಂಡ ನಂತರ ಚುನಾವಣೆ ನಡೆಸಲು ಕ್ರಮವಹಿಸಬೇಕಿರುತ್ತದೆ. |

**ಸಂಖ್ಯೆ:** ನಅಇ 05 ಎಲ್‌ಸಿಕ್ಯೂ 2026

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು